## ಪಟಪಟ ಗಾಳಿಪಟ

ಪಟವ ಹಾರಿಸಲು ಪುಟ್ಟಾ!
ನೀ ಇಳಿಯಲೇಬೇಕು
ಅಪ್ಪನ ಹೆಗಲಿಂದ.
ನೀ ಹಾರಿಸಬೇಕಿದೆ ಗುಡ್ಡದಾಚೆಗಿರುವ
ಸೂರ್ಯನ ಹತ್ತಿರ.

ಅಪ್ಪನಿಗೆ ಕಳವಳ
ಎಲ್ಲಿ ನೀ ನಡೆದರೆ ನೋಯುತ್ತೀ...
ಮಗು, ನೀ ಇಳಿಯಲೇಬೇಕು
ಅಪ್ಪನ ಹೆಗಲಿಂದ

ನೀ ಹತ್ತಿ ಇಳಿಯಬೇಕಿದೆ
ಕಲ್ಲು ಮುಳ್ಳಿನ ಹಾದಿ
ಕಾದಿವೆ ಮಗಳೆ ನಿನಗೆ
ಸಾವಿರದ ಹಗಲು ರಾತ್ರಿ
ಅಲ್ಲಿ ನೋಡಬೇಕಿದೆ ನೀ
ಸೂರ್ಯನ ಹಲವು ರೀತಿ

ದಿನವೂ ಅಪ್ಪ ಮಗಳ
ಪ್ರಾರ್ಥನೆ ಇದೇ:
'ಪ್ರತಿ ಕ್ಷಣವೂ ಹೀಗೇ ಇರಲಿ'

● **ಶಿವಕುಮಾರ ಕಟ್ಟೀಮನಿ**



## ಅಪ್ಪನೆಂಬ ಅದ್ಭುತ

ಹೆಜ್ಜೆ ಮೇಲೆ ಹೆಜ್ಜೆಯಿಟ್ಟು
ಅಪ್ಪಿ ತಪ್ಪಿ ನಡೆಯುವಾಗ
ತಬ್ಬಿಕೊಂಡು ನಡೆಸಿದಾತ
ಅಪ್ಪನೆಂಬ ಅದ್ಭುತ

ಎಳೆಯನಾಗಿ ಗೆಳೆಯನಾಗಿ
ಗೋಲಿ ಬಳಪಕೆ ಸಾಥಿಯಾಗಿ
ಅರ್ಥವಿರದ ಪ್ರಶ್ನೆಗೆಲ್ಲಾ
ಮಮತೆ ತುಂಬಿ ಉತ್ತರಿಸಿದಾತ

ಗೆದ್ದು ಬಾರದಿದ್ದರೂ
ಬಿದ್ದು ಬರಬಾರದೆಂದೂ
ತಲೆ ಎತ್ತಿ ನಡೆಯುವುದ
ಕಲಿಸಿ ಕೊಟ್ಟವ

ಹನುಮನಂತೆ ಹೆಗಲಮೇಲೆ
ಹೊತ್ತು ಜಾತ್ರೆಯಲ್ಲ ಸುತ್ತಿ
ಜಗದಗಲ ನಗೆಯ ಬೀರಿ
ಹಿರಿ ಹಿರಿ ಹಿಗ್ಗಿದಾತ

ಮೂರು ಗೇಣಿನಷ್ಟೆ ಅಂತರ
ಭಾಸವಾಗುತ್ತಿದ್ದ ಬಾನಹಂದರ
ನೋಡಲದೆಷ್ಟು ಸುಂದರ
ಆಕಾಶ ಭೂಮಿ ಮಂದಾರ
ಅಪ್ಪನ ಹೆಗಲದು ಸುಂದರ

ಹೆಗಲನೇರಿಸಿ ಮುಗಿಲ ಮುಟ್ಟಿಸಿ
ಹಾರುವ ಗಾಳಿಪಟಕ್ಕೆ
ಬಾಲಂಗೋಚಿ ಕಟ್ಟಿ ಕೊಟ್ಟವ
ಮೆತ್ತಗೆ ಬಾಲ್ಯಕ್ಕೆ ಜಾರಿದವ

● **ಕಲ್ಮೇಶ ಹ. ತೋಟದ**